

**ಸುಧಾ ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಪ್ರಬಂಧ**

# ನೆನಪುಗಳ ಒನಪು

★ ಕೆ.ಎಲ್. ಶ್ರೀವತ್ಸ

'ತ್ರಾರ ಸುಖದೊಳಗೆನ್ನ ಮರೆತಿಹಳು ಎನ್ನದಿರಿ..' ಮೈಸೂರು ಮಲ್ಲಿಗೆಯ ಈ ಕವನ, ಕೇವಲ ಪದಗಳ ಗುಚ್ಛವಾಗುಳಿಯದೆ ನಮ್ಮ ಹೃದಯಗಳಲ್ಲಿ ಮನೋಜ್ಞ ದೃಶ್ಯವಾಗಿ ಅಚ್ಚಾಗಿಬಿಟ್ಟಿದೆ. 'ನಿಮ್ಮ ನೆನಪೇ ನನ್ನ ಹಿಂಡುವುದು ಹಗಲಿನಲಿ..' ಎಂದು ಭಾವ ತೀವ್ರತೆಯಲ್ಲಿ, ಹೃದಯಕ್ಕೆ ಲಗ್ಗೆ ಇಟ್ಟ ವಿರಹದ ಕಹಿಯನ್ನು ನೆನಪಿನ ಬುಟ್ಟಿಯಲ್ಲಿ ತುಂಬಿಕೊಂಡ ಗಂಡ ಹೆಂಡತಿಯ ನಡುವಿನ ಅನ್ಯೋನ್ಯತೆಯ ಸಿಹಿಯಿಂದ ಕರಗಿಸುವ ಮನದನ್ನೆ ಅಲ್ಲಿದ್ದಾಳೆ! ಈ ದೃಶ್ಯ ಕಾವ್ಯ ನಮ್ಮ ನೆನಪಿನ ಹಗೇವುಗಳಲ್ಲಿ ಅಳಿಸಲಾಗದಂತೆ ಉಳಿದುಕೊಂಡದ್ದಾದರೂ ಯಾಕೆ? ಇದೇನಿದು, ಮನಸು ತಂತಾನೇ ಮೈಸೂರು ಮಲ್ಲಿಗೆಯ ಸೆಳೆತಕ್ಕೀಡಾಗಿದ್ದೇಕೆ? ಕಾರಣ, ಇದು ರಸ ಘಳಿಗೆಯ ಒಂದು ಝಲಕ್, ಇಂತಹ ರಸ ವಿರಸದ ಘಳಿಗೆಗಳನ್ನು, ಬಾಗಿ ಬಳುಕುತ್ತಾ ಮನೋ ರಂಗದ ಮೇಲೆ ಆಡಿಸಿ ಮೂಡಿಸುವ 'ನೆನಪು'ಗಳ ಒನಪೇ ಈ ಬರಹ.

'ನೆನಪನ್ನು' ಜೋಪಾನವಾಗಿ ಮನೋವಿಜ್ಞಾನಿಯ ಪ್ರಯೋಗಾಲಯಕ್ಕೆ ಕರೆತಂದಾಗ ಹಲವಾರು ಸಂದೇಹಗಳು: ನೆನಪೆಂದರೆ, ಪ್ರಾಕೃತಿಕ ಯಂತ್ರಾಂಶವೇ? ಅಥವಾ ಆಗಾಗ ಬೇಕಾದಂತೆಲ್ಲ ತಿದ್ದಿ ತೀಡಬಲ್ಲ ತಂತ್ರಾಂಶವೇ? ನೆನಪಿಟ್ಟುಕೊಳ್ಳುವುದೆಂದರೆ ಕೇವಲ ಯಾಂತ್ರಿಕ ಪ್ರಕ್ರಿಯೆಯಾಗಿರದೆ, ನೋಡಿದ, ಕೇಳಿದ, ಅನುಭವಿಸಿದ ಘಟನೆಯೊಂದರ ಇಡೀ ಚಿತ್ರಣವೇ ಅದೆಲ್ಲೋ ಒಳಗೆ ಮುದ್ರಿತವಾಗುವ ಮಾಂತ್ರಿಕ ವ್ಯವಸ್ಥೆಯೇ? ಮೇಲಿನ ಆ ಕವಿತೆಯನ್ನು ಓದುವಾಗ, ಪ್ರೇಮಕವಿ ಕೆಎಸ್ ನ, ಮೈಸೂರಿನ ಒಂದು ಸಾಂಪ್ರದಾಯಿಕ ಮನೆತನ, ಅದರಲ್ಲಿನ ಅವಿಚ್ಛಿನ್ನ ದಾಂಪತ್ಯದ ಸೊಗಡು, ಮಲ್ಲಿಗೆಯ ಘಮಲು ಇವೆಲ್ಲ ನಮ್ಮೊಳಗಿರುವ ಅಳೆಯಲಾಗದ ವಿಸ್ತೀರ್ಣದ ಮನಃಪಟಲದ ಮೇಲೆ ಜೀವ ಪಡೆಯುವಂತೆ ಭಾಸವಾಗುತ್ತದೆ. ಇವನ್ನೆಲ್ಲ ಹೀಗೆ ಪರದೆಯ ಮೇಲೆ ಮೂಡಿಸುವ ಪ್ರೊಜೆಕ್ಟರ್ ಈ 'ನೆನಪೇ'?

ಮನುಷ್ಯ ಮೂರು ವಿಧಗಳಲ್ಲಿ ಚಿತ್ರಿಕೆಯಾಗಿ, ಶಬ್ದವಾಗಿ ಮತ್ತು ಅರ್ಥ ರೂಪದಲ್ಲಿ  ನೆನಪಿಟ್ಟುಕೊಳ್ಳುತ್ತಾನಂತೆ. ಅವನು ಕಂಡುಂಡ ಅನುಭವಗಳು ನೆನಪುಗಳ 'ಬಿಟ್'ಗಳಾಗಿ ಅವನ ಮೆದುಳಿನ ಮಡಿಕೆಗಳಲ್ಲಿ ಅಡಕವಾಗುತ್ತವಂತೆ. ವಿಪರ್ಯಾಸವೆಂದರೆ, ಹೀಗೆ ಒಳಗೆ ಸೇರಿದ್ದೆಲ್ಲ ಚಿರಂಜೀವಿಗಳು ಆಗೋದಿಲ್ಲ. ಕೆಲವು ನೆನಪುಗಳಿಗೆ ಬರಿಯ 30 ಸೆಕೆಂಡುಗಳ ಅಲ್ಪಾಯಸ್ಸು..! 1956ರಲ್ಲಿ ಮಿಲ್ಲರ್ ಎಂಬ ಪುಣ್ಯಾತ್ಮ, ಮನುಷ್ಯ ತನ್ನ 'ಅಲ್ಪಾವಧಿ' 'ಮೆಮೊರಿ' ಯಲ್ಲಿ ಐದರಿಂದ ಒಂಬತ್ತು ಸಂಗತಿಗಳನ್ನಷ್ಟೇ ತುರುಕಿಟ್ಟುಕೊಂಡಾನು ಎಂದು ಸಾರಿದ. ಈ ತೀರ್ಮಾನಕ್ಕೆ ಬರಲು ಅವನು ಪ್ರಯೋಗಿಸಿದ್ದು 9 ಸಂಖ್ಯೆಗಳನ್ನು. ತೋರಿದ 9 ಸಂಖ್ಯೆಗಳಲ್ಲಿ ಪ್ರಯೋಗಕ್ಕೆ ಒಳಪಟ್ಟವರಲ್ಲಿ ಬಹಳಷ್ಟು ಮಂದಿ ನೆನಪಿಟ್ಟುಕೊಳ್ಳರು ಸಾಧ್ಯವಾದದ್ದು ಐದು ಯಾ ಏಳೇ ಅಂತೆ! ಬಹುಶಃ ಟೆಲಿಫೋನ್ ಕಂಪನಿಗಳು ಮೊದಮೊದಲು ತಂತಮ್ಮ ಗ್ರಾಹಕರ ದೂರವಾಣಿ ಸಂಖ್ಯೆಯನ್ನು ಏಳಕ್ಕೆ ಸೀಮಿತಗೊಳಿಸಿದ್ದು ಇದೇ ಕಾರಣ